**ದಿನಾಂಕಃ 20-11-2019** **ಪಿ ಡಬ್ಲ್ಯೂಃ 2** **ಓ ಎಸ್ ನಂ 41/2017**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದ :**

ದಾವಾ ಆಸ್ತಿಯ ಸರ್ವೆ ನಂ. 132ಃ133ಃ134. ದಾವಾ ಆಸ್ತಿಯು ಒಟ್ಟು ಸರ್ವೆ ನಂಬರ ಕೂಡಿ ಇದೆ. ಮೂರು ಸರ್ವೆ ನಂಬರಗಳಲ್ಲಿ ನಮ್ಮ ಆಸ್ತಿ ಬರುತ್ತದೆ. 4 ಎಕರೆಗೆ ಈ ದಾವೆ ನಡೆದಿರುತ್ತದೆ. ದಾವಾ ಆಸ್ತಿಯ ಪೂಃ ಹಳ್ಳ, ಪಃ ಭಾಸ್ಕರರಾವ್ ಎಂಬುವರ ಜಮೀನು, ಉಃ ನಾಗವೇಣಿ ಶ್ರೀರಾಮಲು ಜಮೀನು, ದಃ ಸುಡುಗಾಡು ಮತ್ತು ಕೆನಾಲು ಬರುತ್ತದೆ. ದಾವಾ ಆಸ್ತಿಯ ಸರ್ವೆ ನಂಬರನ ಒಟ್ಟು ವಿಸ್ತೀರ್ಣ 805 ಎಕರೆ 26 ಗುಂಟೆ. ದಾವಾ ಆಸ್ತಿ ಹಳೇಮುದ್ಲಾಪುರ ಟೆನೆಂಟ್ ಕೋ-ಆಪರೇಟಿವ್ ಸೊಸೈಟಿಗೆ ಸಂಬಂಧಿಸಿದ ಜಮೀನು ಎಂದರೆ ಸರಿಯಲ್ಲ ಅದು ಸರ್ಕಾರಕ್ಕೆ ಸಂಬಂಧಪಟ್ಟ ಜಮೀನು ಎಂದು ಹೇಳುತ್ತಾರೆ. ದಾವಾ ಸರ್ವೆ ನಂಬರ ಟೆನೆಂಟ್ ಕೋ-ಆಪರೇಟಿವ್ ಪಾರ್ಮಿಂಗ್ ಸೊಸೈಟಿಗೆ ಸಂಬಂಧಪಟ್ಟ ಜಮೀನು ಮತ್ತು ಅದು ಆ ಸೊಸೈಟಿಯ ಸದಸ್ಯರಿಗೆ ಮಂಜೂರಾಗುವ ಜಮೀನು ಎಂದರೆ ಗೊತ್ತಿಲ್ಲ. ನಾನು ಚರ್ಚ್ ನಲ್ಲಿ ಕೆಲಸ ಮಾಡುತ್ತೇನೆ.

ದಾವಾ ಆಸ್ತಿಯ ಮೇಲೆ 1 ನೇ ಪ್ರತಿವಾದಿಯು ದಾವೆ ಸಂ.332ಃ14 ನ್ನು ನನ್ನ ತಾಯಿಯ ಮೇಲೆ ಹಾಕಿದ್ದರು ಎಂದರೆ ಗೊತ್ತಿಲ್ಲ ನಂತರ ನನ್ನ ತಂದೆ ತೀರಿಹೋದ ನಂತರ ನಮಗೆ ಗೊತ್ತಾಯಿತು. ನನ್ನ ತಂದೆ ದಿಃ4-6-13 ರಂದು ತೀರಿಕೊಂಡಿರುತ್ತಾರೆ. ಸದರಿ ದಾವೆಯಲ್ಲಿ ನನ್ನ ತಾಯಿಗೆ ನೋಟಿಸು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಮ್ಮ ಹೊಲದ ವಿಷಯವಾಗಿ ಹಾಕಿರುತ್ತೇವೆ. ಸದರಿ ದಾವೆಯಲ್ಲಿ ನನ್ನ ತಾಯಿಗೆ ನೋಟಿಸು ಮುಟ್ಟಿದ್ದರೂ ನಾವು ಉದ್ದೇಶಪೂರ್ವಕವಾಗಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆ ಡಿಕ್ರಿಯಾಗಿತ್ತು ಎಂದರೆ ಸರಿ. ಅದರ ಮೇಲೆ ನನ್ನ ತಾಯಿ ಆರ್ ಎ ನಂ.14ಃ17 ಅಪೀಲು ಸಲ್ಲಿಸಿದ್ದಾರೆಂರದೆ ಸರಿ. ಸದರಿ ದಾವೆಯಲ್ಲಿರುವ ವಾದಿಯ ಸ್ವಾಧೀನಕ್ಕೆ ನಾವು ತೊಂದರೆ ನೀಡಬಾರದೆಂಬ ಆದೇಶವಾಗಿತ್ತು ಎಂದರೆ ಸರಿ ಅದು ನಮಗೆ ನಂತರ ತಿಳಿದಿರುತ್ತದೆ. ಆದೇಶವಾದರೂ ಸಹ ನಾವು ಅವರ ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ಪ್ರತಿವಾದಿಯು ನಮ್ಮ ವಿರುದ್ದ ಸಿ.ಮಿಸ್.18ಃ16 ಅರ್ಜಿ ಸಲ್ಲಿಸಿ ಪೋಲಿಸ ಪ್ರೊಟೆಕ್ಷನ್ ಕೋರಿದ್ದರು ಎಂದರೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯು ಹಳೆಯ ಆಸ್ತಿ 132 ಎಂದು ಹಾಗೂ ಹೊಸ ಆಸ್ತಿ 134 ಎಂದು ನಮೂದಿಸಿದ್ದರು ಎಂದರೆ ನನಗೆ ಮಾಹಿತಿ ಇಲ್ಲ.

ದಾವಾ ಆಸ್ತಿಯನ್ನು ನಮ್ಮ ತಂದೆಗೆ ಸರ್ಕಾರದವರು ಮಂಜೂರಾತಿ ಮಾಡಿರುತ್ತಾರೆ. ಮಂಜಾರಾತಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಳೆಯಪಹಣಿ ಪತ್ರಿಕೆ, ಪಟ್ಟಾ ಪುಸ್ತಕ ಮತ್ತು ಚಕ್ಕಬಂದಿ ತೋರಿಸುವ ದೃಡಿಕೃತ ಪ್ರತಿ ಮತ್ತು ತಹಶೀಲ್ದಾರ ಮಾಡಿದ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತೇನೆಂದು ಹೇಳುತ್ತಾರೆ. ನನ್ನ ತಂದೆಗೆ ಸುಮಾರು 1997 ರಲ್ಲಿ ಮಂಜೂರಾತಿಯಾಗಿರುತ್ತದೆ. ದಾವಾ ಆಸ್ತಿ ಹೇಗೆ ಬಂದಿತ್ತು ಎಂದು ನನ್ನ ತಾಯಿಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನನ್ನ ತಾಯಿ

ಆರೋಗ್ಯವಾಗಿದ್ದಾಳೆಂದರೆ ಸರಿಯಲ್ಲ. ಅವಳಿಗೆ ಹೃದಯ ಸಂಬಂಧಿಕಾಯಿಲೆ ಮತ್ತು ಕಣ್ಣು ಸರಿಯಾಗಿ ಕಾಣುವುದಿಲ್ಲ. ದಾವಾ ಆಸ್ತಿಯನ್ನು 1978 ರಲ್ಲಿ ಪ್ರತಿವಾದಿಗೆ ಮಂಜೂರಾತಿ ಮಾಡಿದ್ದಾರೆಂದು ಗೊತ್ತಿಲ್ಲ. ದಿ:30-9-1978 ರಂದು ಮಂಜೂರಾತಿ ಮಾಡಿದ್ದಾರೆಂದರೆ ಗೊತ್ತಿಲ್ಲ. ದಾವಾ ಆಸ್ತಿಗೂ ನಮಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಂಜೂರಾತಿ ಮಾಡಿದ್ದರೂ ನಾವು ಅವರ ಸ್ವಾಧೀನಕ್ಕೆ ತೊಂದರೆ ಮಾಡಿದ್ದೇವೆಂದರೆ ಸರಿಯಲ್ಲ. ನಮ್ಮ ದಾವೆ ಹಾಕಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಉಳುಮೆ ಮಾಡುತ್ತಿದ್ದು ಆತನೇ ಮಾಲೀಕನು ಮತ್ತು ಸ್ವಾಧೀನದಾರನು ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಸಂಬಂಧ ಇಲ್ಲದೇ ಇದ್ದರೂ ಅದನ್ನು ಕಬಳಿಸಲು ಸುಳ್ಳು ದಾವೆ ಹಾಕಿ ಸುಳ್ಳು ಹೇಳುತಿದ್ದೇನೆಂದರೆ ಸರಿಯಲ್ಲ. ಕೃಷಿ ಪಾಸಪುಸ್ತಕಗಳನ್ನು ಸೃಷ್ಟಿಸಿಕೊಂಡು ಹಾಜರು ಮಾಡಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಗೆ 1 ನೇ ಪ್ರತಿವಾದಿಗೆ ಮಾಲೀಕನಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಪ್ರಧಾನ ಸಿವಿಲ್ ಜಡ್ಜ್ ಕೊಪ್ಪಳ**